**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ–225/2023**

ಪಿ.ಡಬ್ಲ್ಯೂಃ– 4

ಸಿ.ಡಬ್ಲ್ಯೂಃ– 3

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಾಜೇಶ್ವರಿ |
| ಗಂಡನ ಹೆಸರುಃ | : | ಅಶೋಕ |
| ವಯಸ್ಸುಃ | : | 28 ವರ್ಷ |
| ವೃತ್ತಿಃ | : | ಕೂಲಿಕೆಲಸ |
| ವಾಸಃ | : | ನಲ್ಲೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು. |

**ದಿನಾಂಕಃ 13–12–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಚಂದ್ರಮೌಳಿ ಉಃ ಮುರುಳಿ ನನಗೆ ಗೊತ್ತು. ಆರೋಪಿ ಚಂದ್ರಮೌಳಿ ನನ್ನ ಅಕ್ಕಳಾದ ಅಂಬಿಕಾರವರ ಗಂಡನಾಗಿರುತ್ತಾನೆ. ಆರೋಪಿಯು ನನ್ನ ಅಕ್ಕ ಅಂಬಿಕಾ ರವರನ್ನು ಆಕೆ ಮೃತಪಡುವ 12 ವರ್ಷದ ಹಿಂದೆ ವಿವಾಹ ಆಗಿದ್ದು ಅವರಿಗೆ ಓರ್ವ ಮಗ ಹಾಗೂ ಮಗಳು ಇರುತ್ತಾರೆ. ನನ್ನ ಅಕ್ಕ ಅಂಬಿಕಾ ಈಗ ಜೀವಂತವಾಗಿಲ್ಲ. ನನ್ನ ಅಕ್ಕ ಅಂಬಿಕಾಳನ್ನು ಆಕೆಯ ಗಂಡನಾದ ಆರೋಪಿ ಚಂದ್ರಮೌಳಿ ಕೊಲೆ ಮಾಡಿರುತ್ತಾನೆ. 2023 ರಲ್ಲಿ ನಾನು ನನ್ನ ತವರು ಮನೆಯಾದ ಕಲ್ಲಹಳ್ಳಿಯಲ್ಲಿ ವಾಸಿಸುತ್ತಿದ್ದೆ. ಆರೋಪಿತ ಮದ್ಯಪಾನ ಮಾಡುವ ಸಲುವಾಗಿ ಹಣ ಹಾಗೂ

ವಡವೆಗಳನ್ನು ನೀಡುವಂತೆ ನನ್ನ ಅಕ್ಕ ಅಂಬಿಕಾರವರಿಗೆ ತೀವ್ರವಾದ ಕಿರುಕುಳ ನೀಡುತ್ತಿದ್ದ. ನನ್ನ ಅಕ್ಕ ಅಂಬಿಕಾರವರು ಆಕೆಯ ವಡವೆಗಳನ್ನು ಅಡವಿಟ್ಟು ಹಾಗೂ ಸಾಲ ಮಾಡಿ ಆರೋಪಿತನಿಗೆ ಒಂದು ಆಟೋರಿಕ್ಷಾವನ್ನು ಕೊಡಿಸಿದ್ದಳು. ಸದರಿ ಆಟೋರಿಕ್ಷಾ ದಿಃ17.07.2023 ರಂದು ಹಾಸನದ ಗಾರ್ಮೆಂಟ್ ಬಳಿ ಕೆಟ್ಟು ಹೋಗಿತ್ತು. ನಾನು ಗೋಕುಲ್ ದಾಸ್ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಅಕ್ಕ ಅಂಬಿಕಾ ಜಾಕಿ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದಳು. ಆಟೋ ಕೆಟ್ಟು ಹೋದ ನಂತರ ನಾನು ಕಲ್ಲಹಳ್ಳಿಗೆ ಹೋದೆ. ಆರೋಪಿ ಹಾಗೂ ನನ್ನ ಅಂಬಿಕ ಹಾಲಗೋಡನಹಳ್ಳಿಗೆ ಹೋದರು.

2. ನಾನು ದಿಃ18.07.2023 ರಂದು ಮತ್ತೆ ಕೆಲಸಕ್ಕೆ ಬಂದಾಗ ನನಗೆ ಸಿಕ್ಕ ನನ್ನ ಅಕ್ಕ ಅಂಬಿಕಾ ರವರು ಆಕೆಯ ಗಂಡನಾದ ಆರೋಪಿ ಮತ್ತೆ ಆಟೋ ರಿಪೇರಿ ಮಾಡಿಸಲು ತನ್ನ ಬಳಿ ಹಣ ಕೇಳುತ್ತಿದ್ದಾನೆ ಎಂದು ತಿಳಿಸಿದಳು. ನಂತರ ನಾನು ನನ್ನ ಅಕ್ಕ ಅಂಬಿಕಾರವರನ್ನು ಕಲ್ಲಹಳ್ಳಿಯ ನನ್ನ ತವರು ಮನೆಗೆ ಕರೆದುಕೊಂಡು ಹೋದೆ. ಅದೇ ದಿನ ಸಂಜೆ ಕಲ್ಲಹಳ್ಳಿಗೆ ಬಂದ ಆರೋಪಿತ ನನ್ನ ಅಕ್ಕ ಅಂಬಿಕಾ ಹಾಗೂ ನನ್ನ ತಾಯಿ ಕಾವೇರಮ್ಮ ರವರ ಮೇಲೆ ಗಲಾಟೆ ಮಾಡಿ ಆಟೋವನ್ನು ರಿಪೇರಿ ಮಾಡಿಸಲು ವಡವೆ ಕೊಡಿ ಇಲ್ಲದಿದ್ದರೆ ಹಣ ಕೊಡಿ ಎಂದು ಜಗಳ ಆಡಿದ. ದಿಃ19.07.2023 ರಂದು ನಾವು ಹಳ್ಳಿ ಮೈಸೂರು ಪೊಲೀಸ್ ಠಾಣೆಗೆ ಈ ಸಂಬಂಧ ಆರೋಪಿಯ ವಿರುದ್ಧ ದೂರು ನೀಡಿದ್ದೆವು. ಪೊಲೀಸರು ಆರೋಪಿಯನ್ನು ಠಾಣೆಗೆ ಕರಸಿ ಬುದ್ದಿವಾದ ಹೇಳಿ ಕಳುಹಿಸಿದ್ದರು.

3. ದಿನಾಂಕಃ 20.07.2023 ರಂದು ನಾನು ಹಾಗೂ ನನ್ನ ಅಕ್ಕ ಅಂಬಿಕಾ ಕೆಲಸಕ್ಕೆ ಹೋಗಲು ಬೆಳಿಗ್ಗೆ 7.20 ಗಂಟೆ ಸಮಯದಲ್ಲಿ ಮನೆ ಬಿಡುವಾಗ ನನ್ನ ಅಕ್ಕ

ಅಂಬಿಕಾ ತನ್ನ ಗಂಡನಿಗೆ ಫೋನ್ ಮಾಡಿ ಆಕೆಯ ಮಾಸ್ಕು ಹಾಗೂ ಐಡಿ ಕಾರ್ಡನ್ನು ತರಲು ಹೇಳಿ ಬಸ್ ಹತ್ತಿ ಬೆಳಿಗ್ಗೆ 8.45 ಗಂಟೆ ಸಮಯಕ್ಕೆ ಹೋಗಿ ಕೆಐಡಿಬಿ ಸರ್ಕಲ್ ನಲ್ಲಿ ಬಸ್ ಇಳಿಯುವಷ್ಟರಲ್ಲಿ ಆರೋಪಿತ ಅಲ್ಲಿ ನಿಂತಿದ್ದ. ಬಸ್ಸಿನಿಂದ ಇಳಿದ ನಾನು ನಾನು ಕೆಲಸ ಮಾಡುವ ಗೋಕುಲ್ ದಾಸ್ ಗೆ ಹೋದೆ. ನನ್ನ ಅಕ್ಕ ಅಂಬಿಕಾ ಐಡಿ ಕಾರ್ಡು ಹಾಗೂ ಮಾಸ್ಕನ್ನು ತೆಗೆದುಕೊಳ್ಳಲು ಆರೋಪಿತನ ಬಳಿ ಹೋದಳು. ನಂತರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನನ್ನ ಚಿಕ್ಕಪ್ಪ ಚಂದ್ರಶೇಖರ್ ರವರು ನನಗೆ ಫೋನ್ ಮಾಡಿ ನನ್ನ ಅಕ್ಕ ಅಂಬಿಕಾ ಎಸ್ ಅಂಕನಹಳ್ಳಿ ಫಾರೆಸ್ಟ್ ಒಳಗೆ ಕೊಲೆಯಾಗಿ ಬಿದ್ದಿರುವ ಬಗ್ಗೆ ತಿಳಿಸಿದರು. ವಿಷಯ ತಿಳಿದ ನಾನು ಹಾಸನ ಮೈಸೂರು ರಸ್ತೆಯ ಎಸ್ ಅಂಕನಹಳ್ಳಿ ಫಾರೆಸ್ಟಿಗೆ ಹೋಗಿರುತ್ತೇನೆ. ಅಲ್ಲಿ ನನ್ನ ಅಕ್ಕ ಅಂಬಿಕಾ ಕೊಲೆಯಾಗಿ ಬಿದ್ದಿರುವುದು ಕಂಡು ಬಂತು. ಚಾಸಾ–4 ಪುನೀತ್ ರವರು ನನ್ನನ್ನು ಭೇಟಿಯಾಗಿ ಆದಿನ ಅಂದರೆ ದಿ:20.07.23ರ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಅವರು ಪ್ರಯಾಣಿಸುತ್ತಿದ್ದ ಹೊಳೇನರಸೀಪುರಕ್ಕೆ ಹೋಗುವ ಬಸ್ಸಿನಲ್ಲಿ ಕೆಐಡಿಬಿ ಸರ್ಕಲ್ ನಲ್ಲಿ ನನ್ನ ಅಕ್ಕ ಅಂಬಿಕಾ ಹಾಗೂ ಆಕೆಯ ಗಂಡನಾದ ಆರೋಪಿ ಚಂದ್ರಮೌಳಿ ಸಹ ಬಸ್ ಹತ್ತಿದ್ದು ಅವರಿಬ್ಬರೂ ಜೋರು ಧ್ವನಿಯಲ್ಲಿ ಬಸ್ಸಿನಲ್ಲಿ ಜಗಳ ಆಡುತ್ತಿದ್ದು ಚಂದ್ರಮೌಳಿ ಕೆಟ್ಟಿರುವ ಆಟೋ ರಿಪೇರಿ ಮಾಡಿಸಲು ನನ್ನ ಅಕ್ಕ ಅಂಬಿಕಾ ರವರ ಬಳಿ ಒಡವೆಗಳನ್ನು ಹಾಗೂ ಸಂಘದಲ್ಲಿ ಹಣ ಕೊಡಿಸುವ ಬಗ್ಗೆ ಕೇಳುತ್ತಿದ್ದು ಈ ಬಗ್ಗೆ ಅವರಿಬ್ಬರಲ್ಲಿ ಜಗಳ ಆಗುತ್ತಿದ್ದು ನಂತರ ಆರೋಪಿ ಚಂದ್ರಮೌಳಿ ಹಾಗೂ ನನ್ನ ಅಕ್ಕ ಅಂಬಿಕಾ ರವರು ಹೊಳೇನರಸೀಪುರದಲ್ಲಿ ಬಸ್ಸಿನಿಂದ ಇಳಿದು ಊರಿಗೆ ಹೋಗುವುದಾಗಿ ತಿಳಿಸಿದರು ಎನ್ನುವ ಬಗ್ಗೆ ನನಗೆ ಹೇಳಿದರು. ಆರೋಪಿತ ಚಂದ್ರಮೌಳಿ ನನ್ನ ಅಕ್ಕ ಅಂಬಿಕಾ

ರವರ ತಲೆಯ ಮೇಲೆ ಸೈಜುಗಲ್ಲನ್ನು ಎತ್ತಿಹಾಕಿ ಆಕೆಯ ಕೊಲೆ ಮಾಡಿರುತ್ತಾನೆ. ನನ್ನ ಅಕ್ಕ ಆರೋಪಿತನ ಆಟೋ ರಿಪೇರಿ ಮಾಡಿಸಲು ಆಕೆಯ ಒಡವೆ ನೀಡಲಿಲ್ಲ ಹಾಗೂ ಸಂಘದಿಂದ ಹಣವನ್ನು ಸಾಲವಾಗಿ ಪಡೆದು ನೀಡಲಿಲ್ಲ ಎನ್ನುವ ಕಾರಣದಿಂದ ಆರೋಪಿತ ನನ್ನ ಅಕ್ಕ ಅಂಬಿಕಾರವರ ತಲೆಯ ಮೇಲೆ ಸೈಜುಗಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ ಎಂದು ನನಗೆ ತಿಳಿದು ಬಂತು.

4. ಆರೋಪಿತ ನನ್ನ ಅಕ್ಕ ಅಂಬಿಕಾ ರವರನ್ನು ಕೊಲೆ ಮಾಡಿದ ನಂತರ ದೊಡ್ಡಕಾಡನೂರು ಪೊಲೀಸ್ ಠಾಣೆಗೆ ಹೋಗಿ ಅಲ್ಲಿದ್ದ ಪೊಲೀಸರಿಗೆ ಕೊಲೆಯ ವಿಚಾರವನ್ನು ಹೇಳಿದಾಗ ತನ್ನ ಮೇಲೆ ಅನುಕಂಪ ಇರಲಿ ಎನ್ನುವ ಕಾರಣದಿಂದ ನನ್ನ ಅಕ್ಕ ಅಂಬಿಕಾ ರವರು ಬೇರೊಬ್ಬನ ಜೊತೆ ಬೈಕಿನಲ್ಲಿ ಬರುತ್ತಿದ್ದುದರಿಂದ ಆಕೆ ಬೈಕ್ ಸವಾರನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ಅನುಮಾನ ಬಂದು ಕೊಲೆ ಮಾಡಿರುವುದಾಗಿ ಹೇಳಿರುತ್ತಾನೆ. ಆದರೆ ನನ್ನ ಅಕ್ಕ ಯಾವುದೇ ಬೈಕ್ ಸವಾರನ ಜೊತೆ ಪ್ರಯಾಣಿಸಿಲ್ಲ ಹಾಗೂ ಯಾವುದೇ ಬೈಕ್ ಸವಾರನ ಜೊತೆ ಅಕ್ರಮ ಸಂಬಂಧ ಹೊಂದಿರಲಿಲ್ಲ. ನನ್ನ ಅಕ್ಕ ಅಂಬಿಕಾ ಆರೋಪಿತನಿಗೆ ಆತನ ಆಟೋರಿಕ್ಷಾ ರಿಪೇರಿ ಮಾಡಿಸಲು ಒಡವೆ ನೀಡಲಿಲ್ಲ ಹಾಗೂ ಸಂಘದಲ್ಲಿ ಸಾಲ ಕೊಡಿಸಲಿಲ್ಲ ಎನ್ನುವ ದ್ವೇಷದಿಂದ ಆರೋಪಿತ ನನ್ನ ಅಕ್ಕ ಅಂಬಿಕಾ ರವರನ್ನು ಕೊಲೆ ಮಾಡಿರುತ್ತಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ. ಆರೋಪಿ ಚಂದ್ರಮೌಳಿ ನನ್ನ ಅಕ್ಕ ಅಂಬಿಕಾ ರವರ ಒಡವೆಗಳನ್ನು ಅಡವಿಟ್ಟ ಬಗ್ಗೆ ರಶೀದಿಯ ಪ್ರತಿಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ 2 ಒಡವೆ ಅಡವಿಟ್ಟ ಚೀಟಿಗಳ

ಪ್ರತಿಗಳನ್ನು ನಿಪಿ–5 ಹಾಗೂ 6 ಎಂದು ಗುರುತಿಸಲಾಯಿತು. ಆರೋಪಿತ ಪಂಚಾಯಿತಿಯಲ್ಲಿ ನನ್ನ ಅಕ್ಕ ಅಂಬಿಕಾ ರವರಿಗೆ ಹೊಡೆಯುವುದಿಲ್ಲ ಹಾಗೂ ಕಿರುಕುಳ ನೀಡುವುದಿಲ್ಲ ಎಂದು ಹೇಳಿ ಒಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದ. ಸದರಿ ಮುಚ್ಚಳಿಕೆ ಪತ್ರವನ್ನು ನಾನು ಪೊಲೀಸರಿಗೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಮುಚ್ಚಳಿಕೆ ಪತ್ರವನ್ನು ನಿಪಿ–7 ಎಂದು ಗುರುತಿಸಲಾಯಿತು. ನಿಪಿ–7 ರಲ್ಲಿ ಆರೋಪಿತನ ಸಹಿ ಇರುತ್ತದೆ ಎಂದು ಸಾಕ್ಷಿದಾರರು ಗುರುತಿಸಿದ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ನಿಪಿ–7 ರಲ್ಲಿ ಸಾಕ್ಷಿದಾರರು ಗುರುತಿಸಿದ ಆಕೆಯ ಅಕ್ಕ ಮೃತ ಅಂಬಿಕಾ ರವರ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲಾತಿ ನನ್ನ ಅಕ್ಕ ಅಂಬಿಕಾ ಆರೋಪಿತನಿಗೆ ಕೊಡಿಸಿದ್ದ ಆಟೋರಿಕ್ಷಾದ ಆರ್ ಸಿ ಬುಕ್ ನ ಪ್ರತಿ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಆರ್ ಸಿ ಬುಕ್ ನ ಪ್ರತಿಯನ್ನು ನಿಪಿ–8 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಫೋಟೋಗಳಲ್ಲಿ ನನ್ನ ಅಕ್ಕ ಅಂಬಿಕಾ ರವರ ಮೃತದೇಹ ಕಂಡು ಬರುತ್ತದೆ. ಸಾಕ್ಷಿದಾರರು ಗುರುತಿಸಿದ 4 ಫೋಟೋಗಳನ್ನು ಕ್ರಮವಾಗಿ ನಿಪಿ–9 ರಿಂದ ನಿಪಿ–12 ಎಂದು ಗುರುತಿಸಲಾಯಿತು. ನಿಪಿ–9 ರಿಂದ 12 ಫೋಟೋಗಳಲ್ಲಿ ಆರೋಪಿತನ ಇರುವಿಕೆಯನ್ನೂ ಸಹ ಸಾಕ್ಷಿದಾರರು ಗುರುತಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು

ನೀಡಲಾಗಿರುತ್ತದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.